176

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ:**

**ಪ್ರಶ್ನೆ:**

ದಿನಾಂಕ 12.08.2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಅರ್ಜಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ದಿನಾಂಕ 12.08.2016ರ ನಂತರ ವಿಳಂಬವಾಗಿ ನಿರಾಕ್ಷೇಪಣಾ ಪತ್ರಗಳು ಸ್ವೀಕೃತಗೊಂಡು ಅರ್ಹ ಅರ್ಜಿಗಳು ಸಿಂಧುತ್ವ ಹಾಗೂ ದಿನಾಂಕ 12.08.2016ರ ಪೂರ್ವದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ಸ್ವೀಕೃತಗೊಂಡ ನಿರಾಕ್ಷೇಪಣಾ ಪತ್ರಗಳು ಎಂಬುದರ ಬದಲು ದಿನಾಂಕ 12.08.2016ರ ಪೂರ್ವದಲ್ಲಿ ಸ್ವೀಕೃತಗೊಂಡ / ಅಂಗೀಕೃತಗೊಂಡ ಕಲ್ಲುಗಣಿ ಗುತ್ತಿಗೆ ಅರ್ಜಿಗಳೆಂದು ಪರಿಗಣಿಸಿ ತಿದ್ದುಪಡಿ ನಿಯಮಗಳಲ್ಲಿ ಆಗಿರುವ ನ್ಯೂನ್ಯತೆಗಳನ್ನು ಸರಿಪಡಿಸಿ, ತಿದ್ದುಪಡಿ ನಿಯಮಾವಳಿಗಳಲ್ಲಿ ಜಾರಿಗೆ ತಂದು, ಅರ್ಹ ಅರ್ಜಿದಾರರಿಗೆ ಸಮರ್ಪಕವಾದ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ Un Saved Application ಎಂದು ಪರಿಗಣಿಸಿ ತೊಂದರೆಗೆ ಒಳಪಟ್ಟಿರುವ ಅರ್ಜಿದಾರರಿಗೆ ಗುತ್ತಿಗೆ ಮಂಜೂರಾತಿ ನೀಡಿದರೆ ರಾಜ್ಯದಲ್ಲಿ ಕಟ್ಟಡ ಕಾಮಗಾರಿಗೆ ಕೊರತೆಯುಂಟಾಗಿರುವ ಮರಳಿನ ಅಭಾವವನ್ನು ಸರಿದೂಗಿಸಲೂ ಸಹಕಾರಿಯಾಗುವುದರ ಕುರಿತು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಭಾರತ ಸರ್ಕಾರವು Mines and Minerals (Development & Regulation) Act, 1957ಗೆ ದಿನಾಂಕ 12.01.2015 ರಂದು ತಿದ್ದುಪಡಿ ತಂದಿರುತ್ತದೆ. ಸದರಿ ತಿದ್ದುಪಡಿ ಕಾಯ್ದೆಯನುಸಾರ ಖನಿಜ ನಿಕ್ಷೇಪಗಳ ಗಣಿಗಾರಿಕೆಗೆ ಗಣಿ ಗುತ್ತಿಗೆಗಳನ್ನು ಹರಾಜು ಮೂಲಕವೇ ಮಂಜೂರು ಮಾಡಬೇಕಾಗಿರುತ್ತದೆ.

ಸದರಿ (ತಿದ್ದುಪಡಿ) ಕಾಯ್ದೆ, ಬರುವ ಮುಂಚಿತವಾಗಿ ಗಣಿ ಗುತ್ತಿಗೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳಿಗೆ ಶಾಸನಬದ್ಧ ದಾಖಲಾತಿಗಳು ಸ್ವೀಕೃತವಾಗಿದ್ದಲ್ಲಿ ಅಂತಹ ಅರ್ಜಿಗಳು M.M.(D&R) ಕಾಯ್ದೆ, 1957ರ ಕಲಂ 10A(2)(b) ಮತ್ತು 10A(2)(c) ರಡಿ ರಕ್ಷಿಸಲ್ಪಟ್ಟ ಅರ್ಜಿಗಳಾಗಿದ್ದು, ಇವುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅರ್ಜಿಗಳು ಕಲಂ 10A(1) ರಡಿ ಅನರ್ಹ ಅರ್ಜಿಗಳಾಗಿರುತ್ತವೆ.

ಭಾರತ ಸರ್ಕಾರವು M.M(D&R) ಕಾಯ್ದೆ, 1957ರ ಕಲಂ 20-A ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ರಾಜ್ಯ ಸರ್ಕಾರಕ್ಕೆ ದಿನಾಂಕ 17.10.2015 ರಂದು ನಿರ್ದೇಶನ ನೀಡಿ, ಉಪಖನಿಜಗಳನ್ನು ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ಹಾಗೂ ತಾರತಮ್ಯವಿಲ್ಲದೆ ಮಂಜೂರು ಮಾಡುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೈಸರ್ಗಿಕ ಸಂಪನ್ಮೂಲಗಳನ್ನು ವಿತರಿಸಲು ನೀಡಿರುವ ನಿರ್ದೇಶನದಂತೆ ಉಪಖನಿಜ ರಿಯಾಯಿತಿ ನಿಯಮಗಳನ್ನು ಪರಿಷ್ಕರಿಸಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ.

ಅದರನ್ವಯ ರಾಜ್ಯ ಸರ್ಕಾರವು ದಿನಾಂಕ 12.08.2016ರಂದು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳನ್ವಯ ಉಪ ಖನಿಜ ಗಣಿಗುತ್ತಿಗೆಗಳನ್ನು ಹರಾಜು ಮೂಲಕವೇ ವಿಲೇವಾರಿ ಮಾಡಬೇಕಾಗಿರುತ್ತದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನಿಯಮ 8-B(1) ರಂತೆ ಈ ನಿಯಮಗಳು ಜಾರಿಯಾಗುವ ಪೂರ್ವದಲ್ಲಿ ಕಲ್ಲು ಗಣಿಗುತ್ತಿಗೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದು, ಮಂಜೂರಾತಿಗೆ ಬಾಕಿ ಇರುವ ಎಲ್ಲಾ ಅರ್ಜಿಗಳು ಗುತ್ತಿಗೆ ಮಂಜೂರಾತಿಗೆ ಅನರ್ಹ ಅರ್ಜಿಗಳಾಗಿರುತ್ತವೆ. ಸದರಿ ಅರ್ಜಿಗಳನ್ನು ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಪರಿಗಣಿಸಲು ಬರುವುದಿಲ್ಲ.

ಆದಾಗ್ಯೂ ನಿಯಮ 8-B (2-d) ಮತ್ತು 8-B(2)(d-1) ಪ್ರಕಾರ ದಿನಾಂಕ 12.08.2016 ರ ಪೂರ್ವದಲ್ಲಿ ಕಲ್ಲು ಗಣಿಗುತ್ತಿಗೆ ಕೋರಿ ಸಲ್ಲಿಸಿದ್ದ ಅರ್ಜಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು / ವರದಿಗಳು ಸ್ವೀಕೃತವಾಗಿರುವ ಅರ್ಜಿಗಳು ಕಲ್ಲು ಗಣಿಗುತ್ತಿಗೆ ಮಂಜೂರಾತಿಗೆ ಅರ್ಹ ಅರ್ಜಿಗಳಾಗಿದ್ದು (Saved Application), ಸದರಿ –

-ಅರ್ಜಿಗಳನ್ನು ನಿಯಮ 8-(B)(2)(e) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಗುತ್ತಿಗೆ ಮಂಜೂರಾತಿಗೆ ಪರಿಗಣಿಸಬೇಕಾಗಿರುತ್ತದೆ.

ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನಿಯಮ 8-B ರ ಉಪ ನಿಯಮ (2)ರ ಕಂಡಿಕೆ (a) to (d) ಮತ್ತು (d -1) ರನ್ವಯ saved applications ವ್ಯಾಪ್ತಿಗೆ ಬಾರದಿದ್ದ ಕಟ್ಟಡ ಕಲ್ಲುಗಣಿ ಗುತ್ತಿಗೆ ಕೋರಿಕೆಯ 4591 ಅರ್ಜಿಗಳು ಕಲ್ಲು ಗಣಿಗುತ್ತಿಗೆ ಮಂಜೂರಾತಿಗೆ ಅನರ್ಹ ಅರ್ಜಿಗಳಾಗಿರುತ್ತವೆ. ಈ ಬಗ್ಗೆ ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 8-B(1) ರಂತೆ ಕಲ್ಲು ಗಣಿಗುತ್ತಿಗೆ ಕೋರಿಕೆ ಅರ್ಜಿಗಳು ಗುತ್ತಿಗೆ ಮಂಜೂರಾತಿಗೆ ಅನರ್ಹವಾಗಿರುವುದಾಗಿ ಹಿಂಬರಹದ ಮೂಲಕ ಸದರಿ ಅರ್ಜಿದಾರರುಗಳಿಗೆ ಮಾಹಿತಿ ನೀಡಲಾಗಿರುತ್ತದೆ.

ಸದರಿ ಹಿಂಬರಹಗಳನ್ನು ಪ್ರಶ್ನಿಸಿ, ಅರ್ಜಿದಾರರುಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯವು ವಿವಿಧ ರಿಟ್ ಅರ್ಜಿ ಪ್ರಕರಣಗಳ ಆದೇಶದಲ್ಲಿ, ಅರ್ಜಿದಾರರಿಗೆ ನೀಡಿರುವ ಹಿಂಬರಹವನ್ನು ವಜಾಗೊಳಿಸಿ, ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಕಲ್ಲು ಗಣಿಗುತ್ತಿಗೆ ಮಂಜೂರಾತಿ ನೀಡಲು ನಿರ್ದೇಶನ ನೀಡಿ ಕಾಲಾವಧಿಯನ್ನು ನಿಗದಿಪಡಿಸಿದೆ. ಈ ರೀತಿ ಅಂದಾಜು 800 ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನಿರ್ದೇಶನ ನೀಡಿರುತ್ತದೆ.

ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B ರ ಸಂವಿಧಾನಿಕ ಬದ್ಧತೆಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 10601/2019 C/W ಇತರೆ ರಿಟ್ ಅರ್ಜಿಗಳು ದಾಖಲಾಗಿರುತ್ತವೆ. ಈ ರಿಟ್ ಅರ್ಜಿಗಳ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ದಿನಾಂಕ 16.08.2019ರ ಆದೇಶದಲ್ಲಿ, ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನಿಯಮ 8-B ರ ಸಂವಿಧಾನ ಬದ್ಧತೆಯನ್ನು (Constitutionally valid) ಎತ್ತಿ ಹಿಡಿದಿರುತ್ತದೆ.

ರಿಟ್ ಅರ್ಜಿ ಸಂಖ್ಯೆ 10601/2019 ರಲ್ಲಿ ದಿನಾಂಕ 16.08.2019 ರಂದು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಫಿರ್ಯಾದುದಾರರಾಗಿದ್ದ ಶ್ರೀ ತಿರುಮಲೇಶ್ (SLP-Diary No. 22120-2020-IV-A), ಶ್ರೀ ಸತೀಶ್ ಕಿಣಿ (SLP(C) No.11921-2020-IV-A) ಮತ್ತು ಶ್ರೀ ಹೆಚ್.ಜಿ.ಸುಧಾಕರ್ (SLP(C) No. 9959-2020-IV-A) ಇವರುಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ SLP ಪ್ರಕರಣಗಳು ವಿಚಾರಣೆ ಹಂತದಲ್ಲಿರುತ್ತವೆ.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 10601/2019 ರಲ್ಲಿ ದಿನಾಂಕ 16.08.2019 ರಂದು ಹೊರಡಿಸಿರುವ ಆದೇಶಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದಿಲ್ಲ.

ಆದ್ದರಿಂದ, ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B(1) ರಂತೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅನರ್ಹಗೊಂಡಿರುವ ಅರ್ಜಿಗಳ ಪ್ರದೇಶದಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡುವಂತೆ ನಿಯಮಾನುಸಾರ ಕ್ರಮವಹಿಸಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಸಂಖ್ಯೆ ಸಿಐ 523 ಎಂಎಂಎನ್ 2021

Halappa

**(ಆಚಾರ್ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು
ವಿಕಲಚೇತನರ, ಹಿರಿಯ ನಾಗರಿಕರ
ಸಬಲೀಕರಣ ಸಚಿವರು.